**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 805/2021**

| | | | |
|---|---|---|---|
| **ಹೆಸರು** | **:** | **ವಿಜಯಲಕ್ಷ್ಮಿ** | **ದೋ.ಸಾ. 1** |
| **ಗಂಡನ ಹೆಸರು** | **:** | **ನಾಗಪ್ಪ** | **ಪ್ರಾ.ಸಾ. 1** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 06-01-2023** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಕುಪನೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದೆ ಇರುವ ಅರೋಪಿ ನನಗೆ ಗೊತ್ತು. ಚಾಸಾ-2 ರಿಂದ ಚಾಸಾಸ-5 ರವರು ನನಗೆ ಗೊತ್ತು. ಚಾಸಾ-9 ರಿಂದ ಚಾಸಾ-12 ರವರು ಸಹ ನನಗೆ ಗೊತ್ತು. ಮೃತ ನಾಗಪ್ಪ ನನ್ನ ಗಂಡ. ಸುಮಾರು 2 ವರ್ಷಗಳ ಹಿಂದೆ ಮೃತ ನಾಗಪ್ಪ ಮತ್ತು ಚಾಸಾ-3, ತಸ್ಲೀಮ, ಕಲಂ, ಮತ್ತು ಸುಮಾರು 5-6 ಜನ ಸಂತೆಗೆ ಆಟೋದಲ್ಲಿ ಹೋಗುತ್ತಿದ್ದರು. ನನಗೆ ಈ ಮಾತನ್ನು ಅಬ್ದುಲ ಕಲಂ ರವರು ತಿಳಿಸಿದರು. ಸದರಿ ಅಬ್ದುಲ ಕಲಂರವರು ಆಟೋ ಪಲ್ಟಿಯಾಗಿ ಡಿಕ್ಕಿಯಾಗಿದ ಕಾರಣ ಮೃತ ನಾಗಪ್ಪ ರವರಿಗೆ ಎಡಕಣ್ಣು ಮತ್ತು ಎದೆಗೆ ಗಾಯ ಆಗಿತ್ತು ಎಂದು ತಿಳಿಸಿದರು. ನನಗೆ ಕಲಬುರಗಿ ಆಸ್ಪತ್ರೆಗೆ ಶರಣಪ್ಪ ರವರು ಕರೆದುಕೊಂಡು ಹೋಗಿದರು. ಆಸ್ಪತ್ರೆಗೆ ಹೋಗುವಾಗ ಮೃತ ನಾಗಪ್ಪ ರವರು ತೀರಿಕೊಂಡಿರುತ್ತಾರೆ. ಈ ಮಾತನ್ನು ಪೊಲೀಸರ ಮುಂದೆ ಹೇಳಿದ್ದೇನೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಯಿತು. ಸಾಕ್ಷಿ ಅದನು ನಾನೆ ಕೊಟ್ಟಿದ್ದು ಎಂದು ನುಡಿಯುತ್ತಾರೆ. ಸದರಿ ದಾಖಲೆಯು ದೂರ ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಂತರ ಮೃತ ನಾಗಪ್ಪನ ಶವ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಗೆ ಭಾವ ಚಿತ್ರ ತೋರಿಸಲಾಗಿ ಸಾಕ್ಷಿ ಆ ಭಾವ ಚಿತ್ರದಲ್ಲಿರುವುದು ನಾನು ಎಂದು ನುಡಿಯುತ್ತಾರೆ. ಸದರಿ ಭಾವ ಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ನಿಪಿ-2 ನ್ನು ಶವ ಪಂಚನಾಮೆ ಕಾಲಕ್ಕೆ ತೆಗೆದುಕೊಳ್ಳಲಾಗಿದೆ. ಸದರಿ ಘಟನೆಯು ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸದರಿ ಆಟೋ ಚಾಲಕ ನ್ಯಾಯಾಲಯದ ಇರುವ ಆರೋಪಿ ಆಗಿರುತ್ತಾನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 09-10-2020 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ನನ್ನ ಗಂಡನಾದ ನಾಗಪ್ಪ ಇವರು ಸುಲೇಪೇಟ ಸಂತೆ ಇರುವುದರಿಂದ ಸಂತೆ ಮಾಡಿಕೊಂಡು ಬರಲು ಸುಲೇಪೇಟ ಗ್ರಾಮಕ್ಕೆ ಹೋಗಿರುತ್ತಾರೆ ಎಂದರೆ ಸರಿ. ನಂತರ ಸಾಯಂಕಾಲ 6.00 ಗಂಟೆ ಸುಮಾರಿಗೆ ನಮ್ಮ ಹೊಲದಿಂದ ಮನೆಗೆ ಬಂದಾಗ ನನ್ನ ಗಂಡ ನಾಗಪ್ಪ ಸಂತೆ ಮಾಡಿಕೊಂಡು ಬಂದಿರಲಿಲ್ಲ ಎಂದರೆ ಸರಿ. ಯಾಕೆ ಬರಲಿಲ್ಲ ಎಂದು ದಾರಿ ಕಾಯುತ್ತಿದ್ದಾಗ ನಮ್ಮ ಗ್ರಾಮದ ಚಾಸಾ-2 ರವರು ಫೋನ್ ಮಾಡಿ ನಾನು ಪ್ಯಾಸೆಂಜರ ಹೊಡೆಯಲು ನನ್ನ ಟಂಟಂ ನಂ. ಕೆಎ- 32 ಸಿ-0733 ಅನ್ನು ತೆಗೆದುಕೊಂಡು ಸುಲೇಪೇಟ ಗ್ರಾಮದ ಬಸವೇಶ್ವರ ಸರ್ಕಲ ಹತ್ತಿರ ಅಂದಾಜು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ನಿಂತುಕೊಂಡಾಗ ನಿಮ್ಮ ಗಂಡನಾದ ನಾಗಪ್ಪ ಮತ್ತು ಚಾಸಾ-3, ಚಾಸಾ-4,ಚಾಸಾ-5 ರವರು ಕುಳಿತುಕೊಂಡರು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ಅಂದಾಜು 2.15 ಗಂಟೆ ಸುಮಾರಿಗೆ ಕುಪನೂರ ಗ್ರಾಮಕ್ಕೆ ಟಂಟಂ ತೆಗೆದುಕೊಂಡು ಸುಲೇಪೇಟ ದಿಂದ ಹೊರಟಿರುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ಸುಲೇಪೇಟ ಗ್ರಾಮದ ದಾಟಿ ಮಹಿಪಾಲರೆಡ್ಡಿ ಇವರ ತೋಟದ ಹಾದಿ ಸಮೀಪ ರಾಜ್ಯ ಹೆದ್ದಾರಿ ಮೇಲೆ ಹೊಡೇಬೀರನಳ್ಳಿ ಕ್ರಾಸದಿಂದ ಕುಪನೂರ ಗ್ರಾಮಕ್ಕೆ ಬರುತ್ತಿರುವಾಗ ಎದುರುಗಡೆಯಿಂದ ಒಂದು ಟಂಟಂ ಚಾಲಕನು ಅತೀ ವೇಗ ಮತ್ತು ನಿಷ್ಕಾಳಜಿಯಿಂದ ಚಲಾಯಿಸಿಕೊಂಡು ಬಂದವನೆ ಎಡಭಾಗದ ರಸ್ತೆಯ ಮೇಲೆ ಹೋಗುತ್ತಿದ್ದ ನಮ್ಮ ಕಡೆಗೆ ಬಂದು ತನ್ನ ಆಟೋದಿಂದ ನಮ್ಮ ಆಟೋದ ಬಲಭಾಗದ ಹಿಂಬದಿಯಲ್ಲಿ ಟಚ್ ಮಾಡಿದನು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆಗ ನಾನು ಅವನು ಟಚ್ ಮಾಡಿದ ಜೊರಿಗೆ ನಿಯಂತ್ರಣ ಕಳೆದುಕೊಂಡಿದ್ದರಿಂದ ನಮ್ಮ ಆಟೋ ರಸ್ತೆಯ ಎಡಭಾಗದಲ್ಲಿ ಪಲ್ಟಿಯಾಗಿದೆ, ಆಗ ಟಂಟಂನಲ್ಲಿ ಕುಳಿತ್ತಿದ್ದ ನಾವೆಲ್ಲರೂ ಕೆಳಗಡೆ ಬಿದ್ದಿದ್ದು, ಆದರೆ ಟಂಟಂ ನಿನ್ನ ಗಂಡನಾದ ನಾಗಪ್ಪ ಮತ್ತು ಚಾಸಾ-3 ರವರ ಮೇಲೆ ಬಿದ್ದಿತ್ತು, ದಾರಿ ಹೋಗುವವರ ಸಹಾಯದಿಂದ ಟಂಟಂ ಎತ್ತುವಷ್ಟರಲ್ಲಿ ನನಗೆ ಡಿಕ್ಕಿ ಪಡಿಸಿದ ಆಟೋ ಚಾಲಕನು ತನ್ನ ಆಟೋವನ್ನು ಅಲ್ಲಿಯೇ ಬಿಟ್ಟು ಓಡಿಹೋದನು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆಟೋ ನಂ. ಕೆಎ-32 ಡಿ-7361 ಇರುತ್ತದೆ, ಈ ಘಟನೆ ಅಂದಾಜು 2.30 ಪಿ.ಎಂ.ಗೆ ನಡೆದಿತ್ತು ಚಾಸಾ-3 ರವರಿಗೆ ನೋಡಲು ಎಡಗೈ ಮುರಿದಂತೆ ಕಂಡುಬಂದಿತ್ತು, ಅಲ್ಲಲ್ಲಿ ಸಣ್ಣ ಪುಟ್ಟ ರಕ್ತಗಾಯಗಳಾಗಿದ್ದವು ಎಂದು ತಿಳಿಸಿರುತ್ತಾರೆ ಎಂದರೆ ಸರಿ.

ದಿನಾಂಕಃ 25-10-2020 ರಂದು ಪೊಲೀಸರು ನನಗೆ ಕರೆಸಿ ನಾನು, ಚಾಸಾ-2 ಮತ್ತು ಚಾಸಾ-3 ರವರು ಕೂಡಿ ಸುಲೇಪೇಟ ಪೊಲೀಸ ಕಛೇರಿಗೆ ಬಂದಿದಾಗ ಅವರ ವಶದಲ್ಲಿದ್ದ ಒಬ್ಬ ವ್ಯಕ್ತಿಯನ್ನು ತೋರಿಸಿದರು. ಚಾಸಾ-2 ಮತ್ತು 3 ರವರು ಇವರನ್ನು ನೋಡಿ ಗುರುತಿಸಿರುತ್ತಾರೆ ಎಂದರೆ ಸರಿ. ಅವನು ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ. ನಾವು ಆತನಿಗೆ ವಿಚಾರಿಸಿದಾಗ ತನ್ನ ಹೆಸರು ಅವಿನಾಶ ಎಂದು ತಿಳಿಸಿದ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂ.ಎಸ್.ಎಸ. ವಕೀಲರಿಂದಃ</u>

ನಾನು ಘಟನೆ ನಡೆದಾಗ ನಮ್ಮ ಹೊಲದಿಂದ ಸುಲೆಪೇಟಗೆ ಸುಮಾರು ಮಧ್ಯಾಹ್ನ 4.00 ಗಂಟೆಗೆ ಹೋಗಿದ್ದೇನೆ. ಆ ದಿನ 4.00 ಗಂಟೆಕಿಂತ ಮುಂಚೆ ನನ್ನ ಗಂಡನ ಬಗ್ಗೆ ನಾನು ವಿಚಾರಿಸಿಲ್ಲ ಎಂದರೆ ಸರಿ. ಆ ದಿನ ಘಟನೆಯ ಬಗ್ಗೆ ತಿಳಿಯುವಕ್ಕಿಂತ ಮುಂಚೆ ನಾನು ನಮ್ಮ ಮನೆಗೆ ಹೋಗಿ ನನ್ನ ಗಂಡನ ದಾರಿ ಕಾಯುವುದು ಆಗಲಿ ಅಥವಾ ಗಂಡನ ಬಗ್ಗೆ ಯಾರಿಗಾದರೂ ಕೇಳುವುದಾಗಲಿ ಮಾಡಿಲ್ಲ ಎಂದರೆ ಸರಿ. ಸದರಿ ಘಟನೆಯ ಬಗ್ಗೆ ನನಗೆ ತಿಳಿಸಿದಾಗ ನಾನು ಹೊಲದಲ್ಲಿದ್ಧೆ. ಆವಾಗ ಎಷ್ಟು ಸಮಯ ಆಗಿತ್ತು ಎಂದರೆ ಹೇಳಲು ಬರುವುದಿಲ್ಲ. ನಮ್ಮ ಹೊಲದಿಂದ ಘಟನಾ ಸ್ಥಳಕ್ಕೆ ಸುಮಾರು 4-5 ಕಿ.ಮೀ. ದೂರ ಆಗಿತ್ತು. ಸದರಿ ಘಟನೆಯು ಯಾರ ತಪ್ಪಿನಿಂದ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವನ್ನು ಚಾಸಾ-2 ರವರು ನನಗೆ ತಿಳಿಸಿದ್ದರಿಂದ ಹೇಳಿದ್ದೇನೆಂದರೆ ಸರಿ. ನನಗೆ ದಿನಾಂಕ, ತಿಂಗಳು ಅಥವಾ ಅಂಕೆ ಸಂಖ್ಯೆಗಳ ಬಗ್ಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ವಾಹನದ ಸಂಖ್ಯೆ ಬಗ್ಗೆ ಹೇಳಿಲ್ಲ ಎಂದರೆ ಸರಿ. ಸದರಿ ಚಾಸಾ-2 ರವರ ವಾಹನದಲ್ಲಿ ಎಷ್ಟು ಪ್ರಯಾಣಿಕರು ಕುಳಿತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಚಾಸಾ-2 ರವರ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸುಲೇಪೇಟ ಪೊಲೀಸರು ನನಗೆ ಕರೆಸಿ ಒಬ್ಬ ವ್ಯಕ್ತಿಯನ್ನು ತೋರಿಸಿದ ವ್ಯಕ್ತಿಯ ಹೆಸರು,ವಿಳಾಸ ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಇಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಲೆಪೇಟನಲ್ಲಿ ನೋಡಿರುತ್ತೇನೆ ಎಂದು ನುಡಿರುತ್ತಾರೆ. ಸುಲೇಪೇಟ ಪೊಲೀಸರ ಮುಂದೆ ನಾನೇ ಖುದ್ದಾಗಿ ದೂರು ಬರೆಸಿದ್ದೇನೆ. ಸದರಿ ನಿಪಿ-1 ರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡ ನಂತರ ಅದರ ಮೇಲೆ ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಸದರಿ ನಿಪಿ-1 ರಲ್ಲಿ ಸಾಯಂಕಲಾ 6.00 ಗಂಟೆ ಸುಮಾರಿಗೆ ನಾನು ಮನೆಗೆ ಬಂದಿದ್ದು, ಇನ್ನೂ ನನ್ನ ಗಂಡ ನಾಗಪ್ಪ ಇವರು ಸಂತೆ ಮಾಡಿಕೊಂಡು ಬಂದಿರಲಿಲ್ಲ, ಯಾಕೆ ಬರಲಿಲ್ಲ

ಎಂದು ದಾರಿಯುತ್ತಿದ್ದೆ ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿ. ಸಾಕ್ಷಿ ನಿಪಿ-1 ರಲ್ಲಿರುವ ಅಲ್ಲಗಳೆದ ವಿಷಯವನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಘಟನೆ ನಡೆದಾಗ ನಮ್ಮ ಜಮೀನಿನಲ್ಲಿರಲ್ಲಿಲ್ಲ, ಘಟನೆ ಯಾವ ರೀತಿ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಈ ಘಟನೆಗೂ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿತನಿಗೂ ಯಾವುದೇ ರೀತಿ ಸಂಬಂಧ ಇಲ್ಲ ಮತ್ತು ಚಾಸಾ-2 ರವರು ತಮ್ಮ ತಪ್ಪಿನಿಂದ ಘಟನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನ ತಪ್ಪಿನಿಂದ ಯಾವುದೇ ಘಟನೆ ಆಗದಿದ್ದರೂ ಚಾಸಾ-2 ರವರ ಮತ್ತು ಪೊಲೀಸರ ಮಾತು ಕೇಳಿ ಪರಿಹಾರ ಹಣ ಪಡೆಯಲು ಸುಳ್ಳು ಪ್ರಕರಣವನ್ನು ದಾಖಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**